ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1487 (1768)
ಮಾನ್ಯ ಸದಸ್ಯರ ಹೆಸರು	ಡಾ: ಜೈಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು
ಉತ್ತರಿಸಬೇಕಾದ ದಿನಾಂಕ	23-03-2020
ಉತ್ತರಿಸುವ ಸಚಿವರು	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಹೆಚ್ಚಾಗಿ ಜನರು ವಾಸಿಸುವ ನಗರ ಪ್ರದೇಶಗಳಲ್ಲಿ ಮರಣೋತ್ತರ ಪರೀಕ್ಷೆ (Post mortem) ವಿಧಾನಕ್ಕೆ ಹೆಚ್ಚಿನ ಸಮಯವು ತೆಗೆದುಕೊಳ್ಳುವುದರಿಂದ ಈ ವ್ಯವಸ್ಥೆಯನ್ನು ನಿರ್ವಹಿಸುವ ವಿಭಾಗಗಳು 24 ಗಂಟೆಗಳ ಕಾಲ ಕೆಲಸ ನಿರ್ವಹಿಸುತ್ತಿವೆಯೇ;	ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆಸ್ಪತ್ರೆ ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಮರಣೋತ್ತರ ಪರೀಕ್ಷೆಯನ್ನು ನಿರ್ವಹಿಸಲಾಗುತ್ತಿದೆ. ವೈದ್ಯರುಗಳು ತಮ್ಮ ದೈನಂದಿನ ಕೆಲಸಗಳಾದ ಹೊರರೋಗಿಗಳ ಸಂದರ್ಶನ, ಒಳರೋಗಿಗಳ ಸಂದರ್ಶನ ಹಾಗೂ ಶಸ್ತ್ರಚಿಕಿತ್ಸೆಗಳ ಕಾರ್ಯದಲ್ಲಿ ಪಾಳಿಯಲ್ಲಿ ಕಾರ್ಯನಿರ್ವಹಿಸಿ, ನಂತರ ಮರಣೋತ್ತರ ಪರೀಕ್ಷೆಯನ್ನೂ ನಿರ್ವಹಿಸುತ್ತಿದ್ದಾರೆ.
ಆ	ರಾಜ್ಯದ ಕೆಲವೊಂದು ಆಸ್ಪತ್ರೆಗಳಲ್ಲಿ ಸೀಮಿತ ಅವಧಿಗೆ ಮಾತ್ರ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ನೊಂದ ಜನರು ದಯನೀಯ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನದಲ್ಲಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರದ ಕ್ರಮಗಳೇನು;	ಬಂದಿರುವುದಿಲ್ಲ.
ಇ	ಮರಣೋತ್ತರ ಪರೀಕ್ಷೆ (Post mortem) ಯಂತಹ ಆತಂಕ ಮತ್ತು ದುಃಖಕರ ಪರಿಸ್ಥಿತಯಲ್ಲಿ ಸಂಬಂಧಿಕರು ಕಾಯುವುದನ್ನು ತಪ್ಪಿಸಲು ದಿನದ 24 ಗಂಟೆಯು ಕಾರ್ಯನಿರ್ವಹಿಸುವ ಬಗ್ಗೆ ಸರ್ಕಾರದ ಕ್ರಮಗಳೇನು?	ಪ್ರಸ್ತುತ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ ಇರುವುದರಿಂದ, ಮರಣೋತ್ತರ ಪರೀಕ್ಷೆಯನ್ನು ವೈದ್ಯರುಗಳು ವಿಳಂಬ ಮಾಡದೇ, ಸಕಾಲದಲ್ಲಿ ಮಾಡಲು ಸರ್ಕಾರದ ಆದೇಶ ಸಂಖ್ಯೆ ಆಕುಕ: 711 ಆಯೋಸಂ 2003 (ಭಾಗ) ದಿನಾಂಕ: 17-09-2003 ರಲ್ಲಿ ಬೆಳಿಗ್ಗೆ 6.00 ರಿಂದ ಸಂಜೆ 6.00 ರವರೆಗೆ ಮರಣೋತ್ತರ ಪರೀಕ್ಷೆ

—2

		ಮಾಡುವ ವೈದ್ಯರಿಗೆ ರೂ.300/- ರಂತೆ ಹಾಗೂ ಸಹಾಯಕರಿಗೆ ರೂ. 150/- ರಂತೆ ಹಾಗೂ ಸಂಜೆ 6.00 ರಿಂದ ಬೆಳಿಗ್ಗೆ 7.00 ರವರೆಗೆ ಮರಣೋತ್ತರ ಪರೀಕ್ಷೆ ಮಾಡುವ ವೈದ್ಯರಿಗೆ ರೂ.500/-ರಂತೆ ಹಾಗೂ ಸಹಾಯಕರಿಗೆ ರೂ.250/-ರಂತೆ ಪ್ರೋತ್ಸಾಹಧನ ನೀಡಿ ಉತ್ತೇಜಿಸಲಾಗುತ್ತಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ದಿನದ 24 ಗಂಟೆಯು ಮರಣೋತ್ತರ ಪರೀಕ್ಷೆ ಕಾರ್ಯ ನಿರ್ವಹಿಸಲಾಗುತ್ತಿದೆ.

ಸಂ:ಆಕುಕ 36 ಹೆಚ್ ಎಸ್ ಡಿ 2020

(ಬಿ.ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು